ದಿನಾಂಕಃ 17.02.2023 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಜೆ ಕೆ ಎಸ್ ವಕೀಲರಿಂದಃ ಆರೋಪಿತರ ಪರವಾಗಿಃ

6. ಮೃತ ಹೇಮಲತಾ ನನ್ನ ತಂಗಿ. ನಾನು ಸುಮಾರು 12 ವರ್ಷಗಳಿಂದ ನನ್ನ ತವರುಮನೆಯಲ್ಲಿಯೇ ವಾಸವಾಗಿದ್ದೇನೆ. ನನ್ನ ಮತ್ತು ನನ್ನ ಗಂಡನ ಸಂಸಾರ ಸರಿ ಇಲ್ಲದ ಕಾರಣ ನಾನು ತವರುಮನೆಯಲ್ಲಿಯೇ ವಾಸವಾಗಿದ್ದೇನೆ. ಮೃತ ಹೇಮಲತಾ

ಮತ್ತು ಆರೋಪಿ ಪ್ರೀತಿಸಿ ಮದುವೆ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಅವರು ಪ್ರೀತಿಸಿ ಮದುವೆ ಮಾಡಿಕೊಂಡಿರುವುದು ನಿಮಗೆ ಇಷ್ಟವಿರಲಿಲ್ಲ ಎಂದರೆ ಸಾಕ್ಷಿ ನಾವೇ ಒಪ್ಪಿ ಅರೆಂಜ್ ಮ್ಯಾರೇಜ್ ಮಾಡಿಕೊಟ್ಟಿದ್ದೆವು ಎನ್ನುತ್ತಾರೆ. ನೀವು ಆರೋಪಿಯ ಮನೆಗೆ ಹೋಗಿ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ.

7. ಆರೋಪಿ ಮತ್ತು ನಿಮ್ಮ ತಂಗಿ ಹೇಮಲತಾ ನಿಮ್ಮ ಮನೆಗೆ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ನಿಮ್ಮ ತಂಗಿ ಹೇಮಲತಾ ಮೃತಪಡುವವರೆಗೆ ಆಕೆ ಆರೋಪಿಯ ವಿರುದ್ಧ ಯಾವುದೇ ದೂರನ್ನು ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆಕೆ ಮಲ್ಲಂದೂರು ಪೊಲೀಸರಿಗೆ ದೂರು ಕೊಟ್ಟಿದ್ದಳು ಎನ್ನುತ್ತಾರೆ. ಎಷ್ಟು ವರ್ಷಗಳ ಹಿಂದೆ ಆ ರೀತಿ ದೂರು ಕೊಟ್ಟಿದ್ದಳು ಎಂದರೆ ಸಾಕ್ಷಿ 7-8 ವರ್ಷಗಳ ಹಿಂದೆ ಎನ್ನುತ್ತಾರೆ. 7-8 ವರ್ಷಗಳ ಹಿಂದೆ ಮಲ್ಲಂದೂರು ಪೊಲೀಸ್ ಠಾಣೆ ಅಸ್ತಿತ್ವದಲ್ಲಿಯೇ ಇರಲಿಲ್ಲ, ಜಕ್ಕನಹಳ್ಳಿ ಹೊರಠಾಣೆ ಇತ್ತು ಎಂದರೆ ಸಾಕ್ಷಿ ನಾವು ಹೋಗಿ ದೂರು ಕೊಟ್ಟು ಬಂದಿದ್ದೇವೆ ಎನ್ನುತ್ತಾರೆ. ನಿಮ್ಮ ಊರಿಗೆ ವಾಹನ ಸೌಲಭ್ಯ ಇದೆ ಎಂದರೆ ಸರಿ.

8. ನಿಮ್ಮ ತವರುಮನೆಗೆ ಸೇರಿದ ಸುಮಾರು 18 ಎಕರೆ ಜಮೀನು ಇದೆ ಎಂದರೆ ಸರಿ. ಅದರಲ್ಲಿ ನಿಮ್ಮ ತಂಗಿ ಹೇಮಲತಾಳಿಗೆ ಯಾವುದೇ ಭಾಗ ಕೊಟ್ಟಿರಲಿಲ್ಲ ಎಂದರೆ

ಸಾಕ್ಷಿ ನಾವು ಯಾರು ಇಲ್ಲಿಯವರೆಗೂ ಆ ಜಮೀನಿನಲ್ಲಿ ಭಾಗ ಕೇಳಿಲ್ಲ ಎನ್ನುತ್ತಾರೆ. ನೀವು ಹೋಗಿ ನೋಡುವಷ್ಟರಲ್ಲಿ ನಿಮ್ಮ ತಂಗಿ ಹೇಮಲತಾ ಮೃತಪಟ್ಟಿದ್ದಳು ಎಂದರೆ ಸರಿಯಲ್ಲ. ನಾನು ಹೋಗಿ ನೋಡಿದಾಗ ಆಕೆ ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯಲ್ಲಿ ಇದ್ದಳು. ಆಕೆಯನ್ನು ಆಸ್ಪತ್ರೆಗೆ ಆರೋಪಿಯೇ ಕರೆದುಕೊಂಡು ಹೋಗಿದ್ದನು ಎಂದರೆ ಸಾಕ್ಷಿ ಆತನೇ ಹೇಮಲತಾಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿ ನಮಗೆ ಫೋನ್ ಮಾಡಿದ್ದನು ಎನ್ನುತ್ತಾರೆ.

9. ನಿಮ್ಮ ಗ್ರಾಮದಲ್ಲಿ ಪ್ರತಿಯೊಬ್ಬರ ಮನೆಯಲ್ಲಿ ವಾಹನಗಳು ಇವೆ ಎಂದರೆ ಸಾಕ್ಷಿ ಎಲ್ಲರ ಮನೆಯಲ್ಲಿ ಇಲ್ಲ ಎನ್ನುತ್ತಾರೆ. ಆಸ್ಪತ್ರೆಯ ಎಲ್ಲಾ ಖರ್ಚನ್ನು ಆರೋಪಿಯೇ ನೋಡಿಕೊಂಡಿದ್ದು ಎಲ್ಲಾ ರಶೀದಿಗಳು ಆತನ ಬಳಿಯೇ ಇವೆ ಎಂದರೆ ಸಾಕ್ಷಿ ಮೊದಲಿಗೆ ಮುಕ್ಕಾಲು ಭಾಗ ಎಂದು ಹೇಳಿ ನಂತರ ಅರ್ಧ ಭಾಗ ಆತ ಕೊಟ್ಟಿದ್ದಾನೆ ಇನ್ನು ಅರ್ಧ ಭಾಗವನ್ನು ನಾವು ಭರಿಸಿದ್ದೇವೆ ಎನ್ನುತ್ತಾರೆ. ಆ ರೀತಿ ನೀವು ಖರ್ಚಿನಲ್ಲಿ ಅರ್ಧ ಭಾಗ ಭರಿಸಿದ್ದ ಬಗ್ಗೆ ಯಾವುದೇ ದಾಖಲೆಗಳನ್ನು ನೀವು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ರಶೀದಿ ಇವೆ ಬೇಕಾದರೆ ಹಾಜರುಪಡಿಸುತ್ತೇನೆ ಎನ್ನುತ್ತಾರೆ. ಆ ರೀತಿ ಯಾವುದೇ ರಶೀದಿಗಳು ನಿಮ್ಮ ಬಳಿ ಇಲ್ಲ ಎಂದರೆ ಸರಿಯಲ್ಲ.

10. ಪೊಲೀಸರು ನಿಮ್ಮನ್ನು ವಿಚಾರಿಸಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನಿಮ್ಮನ್ನು ವಿಚಾರಿಸಿದ ದಿನಾಂಕವನ್ನು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಆರೋಪಿ ಮತ್ತು ಹೇಮಲತಾ ಅನ್ಯೋನ್ಯವಾಗಿದ್ದರು ಎಂದರೆ ಸರಿಯಲ್ಲ. ಹೇಮಲತಾಳ ಮಕ್ಕಳನ್ನು ಸಹ ನೀವು ಆರೋಪಿಗೆ ಕೊಡುತ್ತಿಲ್ಲ ಎಂದರೆ ಸಾಕ್ಷಿ ಆಕೆ ಮೃತಪಟ್ಟಾಗಿನಿಂದ ಆರೋಪಿ ಮಕ್ಕಳನ್ನು ನೋಡಲು ಬಂದಿಲ್ಲ ಎನ್ನುತ್ತಾರೆ. ಆಸ್ತಿ ಆರೋಪಿಗೆ ಹೋಗುತ್ತದೆ ಎನ್ನುವ ಕಾರಣಕ್ಕೆ ಮಕ್ಕಳನ್ನೂ ಸಹ ನಿಮ್ಮ ಬಳಿಯೇ ಇರಿಸಿಕೊಂಡು ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

11. ಆರೋಪಿ ಕುಡಿದುಕೊಂಡು ಬಂದು ಹೇಮಲತಾಳೊಂದಿಗೆ ಗಲಾಟೆ ಮಾಡಿ ಆಕೆಗೆ ಹಿಂಸೆ ಕೊಡುತ್ತಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಹೇಮಲತಾ 2-3 ತಿಂಗಳ ಕಾಲ ತವರು ಮನೆಯಲ್ಲಿಯೇ ಉಳಿದುಕೊಳ್ಳುತ್ತಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಿಮ್ಮ ತಂಗಿ ಹೇಮಲತಾ ಎಂದಿಗೂ ಸಹ ನಿಮ್ಮ ಮನೆಗೆ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಹೇಮಲತಾ ನಿಮ್ಮ ಮನೆಗೆ ಬಂದಿದ್ದಾಗಿ ಮತ್ತು ಆರೋಪಿ ಆಕೆಯನ್ನು ಚೆನ್ನಾಗಿ ನೋಡಿಕೊಳ್ಳುವುದಾಗಿ ಹೇಳಿ ಕರೆದುಕೊಂಡು ಹೋಗಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆ

ರೀತಿ ಆರೋಪಿ ಯಾವ ದಿನಾಂಕ, ತಿಂಗಳು ಮತ್ತು ವರ್ಷದಂದು ನಿಮ್ಮ ಮನೆಗೆ ಬಂದು ಹೇಮಲತಾಳನ್ನು ಕರೆದುಕೊಂಡು ಹೋಗಿದ್ದನು ಎಂದು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ನಿಖರವಾಗಿ ಹೇಳಲಾಗುವುದಿಲ್ಲ ಎನ್ನುತ್ತಾರೆ.

12. ಆರೋಪಿ ತನ್ನ ಚಿಕ್ಕಪ್ಪನ ಮಗನ ಮೊಬೈಲ್ ನಿಂದ ನನ್ನ ಮೊಬೈಲ್ ಗೆ ಕರೆ ಮಾಡಿದ್ದನು. ಹೇಮಲತಾ ಇಲಿ ಪೇಸ್ಟನ್ನು ತಿಂದ ಕೂಡಲೇ ಆಕೆಗೆ ಪ್ರಜ್ಞೆ ಹೋಗಿತ್ತು ಎಂದರೆ ಸರಿಯಲ್ಲ. ಹೇಮಲತಾಳಿಗೆ ಹೊಟ್ಟೆನೋವು ಇದ್ದ ಕಾರಣ ಆಕೆ 2-3 ಬಾರಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದ್ದಳು ಮತ್ತು ಆ ಬಗ್ಗೆ ನಿಮಗೆ ಗೊತ್ತಿದೆ ಎಂದರೆ ಸರಿಯಲ್ಲ. ಹೊಟ್ಟೆನೋವು ತಡೆಯಲಾರದೇ ಇಲಿ ಪಾಷಾಣವನ್ನು ಸೇವಿಸಿ ಹೇಮಲತಾ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಆಕೆಯ ಸಾವಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

13. ಆರೋಪಿ ಹೇಮಲತಾಳಿಗೆ ನೀನು ಸಾಯಿ ನೀನು ಸತ್ತರೆ ನೆಮ್ಮದಿಯಾಗಿ ಇರುತ್ತೇನೆ ಎಂದು ಹೇಳಿ ಹಿಂಸೆ ಕೊಡುತ್ತಿದ್ದಾಗಿ ನೀವು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಿಮ್ಮ ತಂಗಿ ಹೇಮಲತಾ ಬದುಕಿದ್ದ ಸಮಯದಲ್ಲಿ ನಿಮ್ಮ ತವರು ಮನೆಯ ಆಸ್ತಿಯಲ್ಲಿ ಭಾಗವನ್ನು ಕೊಡುವಂತೆ ಕೇಳುತ್ತಿದ್ದಳು ಎಂದರೆ ಸರಿಯಲ್ಲ. ಅದರ ಸಿಟ್ಟಿನಿಂದ ನೀವು

ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿ ಮತ್ತು ಹೇಮಲತಾ ಅನ್ಯೋನ್ಯವಾಗಿದ್ದರು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ